

ಇದ್ದಾಗ ಮತ್ತು ರಾತ್ರಿಯಿಡೀ ಹಲ್ಲು ಕಡಿಯುವ ಚಟವಿದ್ದಾಗ ಈ ನೋವು ಇರುತ್ತದೆ.

**ಜುಂ ಎನ್ನುವ ಸಂವೇದನೆ**

ಇದು ನೋವಲ್ಲ, ಬಿಸಿ ಅಥವಾ ತಣ್ಣಗಿನ ಆಹಾರ ಸೇವಿಸಿದಾಗ ಜುಂ ಎಂದು ಕಾಡುವ ಅಸಹನೀಯ ಅನುಭವ.ಕೆಲವು ಬಾರಿ ತಣ್ಣಗಿನ ಗಾಳಿ ಒಳಗೆ ಹೊಕ್ಕಾಗ ಕೂಡಾ ಹೀಗನ್ನಿಸಬಹುದು.

**ತೀವ್ರವಾದ ಬಡಿಯುವ ನೋವು**

ಹಲ್ಲನ್ನು ಮುಟ್ಟಲೂ ಸಾಧ್ಯವಿಲ್ಲದ,ಬಾಯಿ ತೆರೆಯಲು ಕಷ್ಟವಾಗುವ, ರಾತ್ರಿ ನಿದ್ದೆಯನ್ನೂ ಮಾಡಲಾಗದಷ್ಟು ತೀವ್ರ ಸ್ವರೂಪದ ನೋವು ಸೋಂಕು ಮತ್ತು ಕೀವು ತುಂಬಿರುವುದನ್ನು ಸೂಚಿಸುತ್ತದೆ. ಅರ್ಧ ತಲೆ, ಕತ್ತು, ಮುಖ ಎಲ್ಲೆಡೆ ನೋವು ಇರುತ್ತದೆ. ನೋವು ಡಬ್ ಡಬ್ ಎಂದು ಹೊಡೆಯುವ ರೀತಿಯದ್ದಾಗಿರುತ್ತದೆ. ಹಲ್ಲು ಹೊರಗಡೆ ವಾತಾವರಣಕ್ಕೆ ತೆಗೆದಿರದ ಮುಚ್ಚಿದ ಗೂಡಿನಂತಿದೆ. ಇದರ ಒಳಗೆ ಸೋಂಕಿನಿಂದ ಒತ್ತಡ ಹೆಚ್ಚಿ ಅದು ಈ ರೀತಿ ಸಿಡಿಯುವ, ಬಡಿಯುವ ನೋವಿಗೆ ಕಾರಣವಾಗುತ್ತದೆ. ಇದಕ್ಕೆ ತಕ್ಷಣ ಸೋಂಕು ನಿಯಂತ್ರಣಕ್ಕೆ ತಂದು ಚಿಕಿತ್ಸೆ ಆರಂಭಿಸದಿದ್ದಲ್ಲಿ ಮುಖದ ಬೇರೆಡೆ ಹರಡುವ ಸಂಭವವಿದೆ. ಹಲ್ಲಿನ ಹುಳುಕು ಮುಂದುವರಿದು ಒಳಗಿನ ಭಾಗವಾದ ತಿರುಳನ್ನು, ಬೇರನ್ನು ತಲುಪಿ ಸೋಂಕಾಗಿರುತ್ತದೆ. ಇಲ್ಲಿ ತುರ್ತು ಚಿಕಿತ್ಸೆಯ ಅಗತ್ಯವಿದೆ.

**ಬಾಯಿಯ ಹಿಂಭಾಗ, ದವಡೆಯಲ್ಲಿ ನೋವು**

ಕಡೆಯ ದವಡೆ ಹಲ್ಲು ಹೊರಬರುವಾಗ ಯಾವುದೇ ಕಾರಣದಿಂದ ತೊಂದರೆಯಾದಲ್ಲಿ ಹಿಂಭಾಗದಲ್ಲಿ ನೋವು ಶುರುವಾಗುತ್ತದೆ. ಜೋರಾದ ನೋವಿನ ಜತೆ ಬಾಯಿಯಲ್ಲಿ ಕೆಟ್ಟ ವಾಸನೆ, ರುಚಿ, ಊತ, ಬಾಯಿ ತೆರೆಯಲು ಕಷ್ಟ ಹೀಗೆ ಅನೇಕ ಲಕ್ಷಣಗಳಿರುತ್ತವೆ.

ಮುಂದೆ ಬಗ್ಗಿದಾಗ ಹಲ್ಲುನೋವು

ನೆಗಡಿಯಾಗಿ ಸೈನುಸೈಟಿಸ್ ತೊಂದರೆ ಇರುವವರಲ್ಲಿ ಕೆನ್ನೆ, ಹಣೆ ಭಾರವೆನಿಸುವುದರ ಜತೆ ಹಲ್ಲು ನೋವು ಇರುತ್ತದೆ. ಮುಂದೆ ಬಾಗಿದಾಗ ಹಲ್ಲಿನ ನೋವು ಹೆಚ್ಚಾಗುತ್ತದೆ. ಕೆನ್ನೆಯ ಒಳಗಿರುವ ಸೈನಸ್‌ಗಳಿಗೆ ಮೇಲಿನ ದವಡೆಹಲ್ಲುಗಳ ಬೇರುಗಳು ಅತ್ಯಂತ ಹತ್ತಿರದಲ್ಲಿರುತ್ತವೆ. ಸೈನಸ್‌ನಲ್ಲಿ ಊತ, ಒತ್ತಡವಿದ್ದಾಗ ಅದು ಹಲ್ಲಿನ ಬೇರುಗಳ ಮೂಲಕ ನೋವಿಗೆ ಕಾರಣವಾಗುತ್ತದೆ. ಸೈನುಸೈಟಿಸ್ ಕಡಿಮೆಯಾದಂತೆ ಹಲ್ಲು ನೋವು ತಾನಾಗಿ ಕಡಿಮೆಯಾಗುತ್ತದೆ.

ಹಲ್ಲುನೋವು ಯಾವುದೇ ರೀತಿಯದ್ದಾದರೂ ಒಳಗಿರುವ ಸಮಸ್ಯೆಯ ಮುನ್ಸೂಚನೆ ನೀಡುತ್ತದೆ. ಹೀಗಾಗಿ ಹಲ್ಲುನೋವಿದ್ದಾಗ ನಿರ್ಲಕ್ಷಿಸದೇ ದಂತವೈದ್ಯರನ್ನು ಕಂಡು ಸಲಹೆ, ಚಿಕಿತ್ಸೆ ಪಡೆಯುವುದು ಸೂಕ್ತ.

ಲೇಖಕಿ ಬೆಂಗಳೂರಿನಲ್ಲಿ ದಂತ ವೈದ್ಯೆ;
ಸಂಪರ್ಕ: 9845229542

## ಹಲ್ಲುನೋವಿಗೆ ಚಿಕಿತ್ಸೆ



ಹಲ್ಲಿನ ಹುಳುಕುಆರಂಭದಲ್ಲಿ ಹಲ್ಲಿನ ಮೇಲ್ಪದರದಲ್ಲಿ ಕಪ್ಪು ಚುಕ್ಕೆ, ಸಣ್ಣ ನೋವಿನಿಂದ ಕೂಡಿದ್ದಾಗ ಹುಳುಕನ್ನು ತೆಗೆದು ಸ್ವಚ್ಛಗೊಳಿಸಿ ಬೇರೆ ವಸ್ತುವನ್ನು (ಬೆಳ್ಳಿ, ಕಾಂಪೋಸಿಟ್, ಗ್ಲಾಸ್ ಐನೊಮರ್)ಅಲ್ಲಿ ತುಂಬಿಸಲಾಗುತ್ತದೆ. ಆದರೆ ನೋವು ಹೆಚ್ಚಾಗಿ ಸೋಂಕಾದಾಗ ಹಲ್ಲಿನ ತಿರುಳು ರೋಗಗ್ರಸ್ತವಾಗಿದೆ ಎಂದರ್ಥ. ಆಗ ಹಲ್ಲಿನ ರಚನೆ ಸೂಕ್ತವಾಗಿದ್ದು ಸುತ್ತಲಿನ ಮೂಳೆಯ ಬಲ ಚೆನ್ನಾಗಿದ್ದರೆ ರೂಟ್ ಕೆನಾಲ್/ಬೇರುನಾಳ ಚಿಕಿತ್ಸೆ ಮಾಡಲಾಗುತ್ತದೆ. ಇಲ್ಲದಿದ್ದರೆ ಹಲ್ಲನ್ನು ತೆಗೆಯುವುದು ಅನಿವಾರ್ಯವಾಗುತ್ತದೆ. ಸೀಳು, ಬಿರುಕು ಬಿರುಕು ಎಲ್ಲಿದೆ,ಎಷ್ಟು ದೊಡ್ಡದಿದೆ ಎಂಬುದರ ಮೇಲೆ ಕಾಂಪೋಸಿಟ್ ಬಾಂಡಿಂಗ್, ತೆಳು ಕವಚ ವೆನಿಯರ್, ಕ್ಯಾಪ್, ಬೇರುನಾಳ ಚಿಕಿತ್ಸೆ ಮೂಲಕ ಬಿರುಕು ಮತ್ತು ನೋವನ್ನು ನಿವಾರಿಸಬಹುದು.

ಜುಂ ಎನ್ನುವ ಅನುಭವ ವಿಶೇಷ ಪೇಸ್ಟ್ ಮತ್ತು ಮೌತ್‌ವಾಶ್‌ಗಳ ಬಳಕೆ, ಹಲ್ಲುಗಳ ಮೇಲೆ ಸೀಲೆಂಟ್ ಹಾಕುವುದು, ಮುರಿದ ಹಲ್ಲುಗಳಿಗೆ ಕ್ಯಾಪ್ ಹಾಕುವುದು ಮತ್ತು ಲೇಸರ್ ಚಿಕಿತ್ಸೆ ಸೂಕ್ತ.

ಹಲ್ಲು ಕಡಿಯುವ ಚಟಮೇಲಿನ ಮತ್ತು ಕೆಳಗಿನ ಹಲ್ಲುಗಳ ಸಂಪರ್ಕ ತಪ್ಪಿಸಲು ರಾತ್ರಿಯ ಹೊತ್ತು ಅವುಗಳ ನಡುವೆ ಅಕ್ರಿಲಿಕ್‌ನಿಂದ ಮಾಡಿದ ಬೈಟ್ ಗಾರ್ಡ್ ಎಂಬ ಸಾಧನ ಇಡಲಾಗುತ್ತದೆ. ಹಲ್ಲುಗಳ ಏರುಪೇರು ಇದ್ದಲ್ಲಿ ಸರಿಪಡಿಸಲಾಗುತ್ತದೆ.

ಕಡೆಯ ದವಡೆ ಹಲ್ಲುಬುದ್ಧಿಹಲ್ಲು ಎಂದು ಕರೆಯಲಾಗುವ ಇದನ್ನು ಪರಿಶೀಲಿಸಿ ಉಳಿಸುವ ಸಾಧ್ಯತೆ ಇದ್ದಲ್ಲಿ ದಂತವೈದ್ಯರು ಆ ಬಗ್ಗೆ ಮಾಹಿತಿ ನೀಡುತ್ತಾರೆ. ಅರ್ಧ ಬೆಳೆದ, ಹುಳುಕಾದ, ನೋವು ಕೊಡುವ ಕಡೆ ದವಡೆ ಹಲ್ಲುಗಳನ್ನು ತೆಗೆಸುವ ಸಲಹೆ ದಂತವೈದ್ಯರು ನೀಡಿದರೆ ತೆಗೆಸುವುದೇ ಉತ್ತಮ.